ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಬಂದಿದೆ.

ಆ) ಒಳಚರಂಡಿ ಯೋಜನೆಯ ಅಂದಾಜು ಪಟ್ಟಿಯನ್ನು ತಯಾರಿಸಲು ಸಂಬಂಧಪಟ್ಟ ರೂ. 6.60 ಲಕ್ಷಗಳ ಸರ್ವೆ ಅಂದಾಜು ಪಟ್ಟಿಯನ್ನು ಮೇಲು ಸಹಿ ಹಾಗೂ ಸರ್ವೆ ಅಂದಾಜು ಮೊತ್ತವನ್ನು ಮಂಡಳಿಗೆ ಠೇವಣಿ ಮಾಡಲು ನಗರಸಭೆ ಚಿಕ್ಕಬಳ್ಳಾಪುರ ಇವರಿಗೆ ತಿಳಿಸಲಾಗಿದೆ. ಹಾಗೂ ಸರ್ವೆ ಅಂದಾಜು ಮೊತ್ತವು ಮಂಡಳಿಗೆ ಠೇವಣಿ ಆದ ಕೂಡಲೇ ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಜಲಸಂವರ್ಧನ ಯೋಜನೆ

278(317) - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-2001 ರಿಂದ ಈಚೆಗೆ ಜಲಸಂವರ್ಧನ ಯೋಜನೆಯಡಿ ಎಷ್ಟು ಕಾಮಗಾರಿಗಳನ್ನು ರಾಜ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಹಾಗೂ ಎಷ್ಟು ಹಣ ಬಿಡುಗಡೆಯಾಗಿದೆ; ಇದಕ್ಕಾಗಿ ಹಾಲಿ ಖರ್ಚು ಮಾಡಿರುವ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಅಂತರ್ಜಲವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಕೆರೆಗಳ ಹೊಳೆತ್ತುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ;

ಇ) ಇದಕ್ಕಾಗಿ ನಬಾರ್ಡ್ ನಿಂದ ಪಡೆದಿರುವ ಸಾಲವೆಷ್ಟು; ಕೊಡುಗು ಜಿಲ್ಲೆಯಲ್ಲಿ ತೆಗೆದುಕೊಂಡ ಕ್ರಮಗಳೇನು; (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಈ) ಮುಂದಿನ ವರ್ಷ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) 2000-2001 ರಿಂದ ಈಚೆಗೆ ಜಲ ಸಂವರ್ಧನೆ ಯೋಜನೆಯಡಿಯಲ್ಲಿ ಯಾವುದೇ ಕಾಮಗಾರಿಗಳನ್ನು ರಾಜ್ಯದಲ್ಲಿ ಹಮ್ಮಿಕೊಂಡಿರುವುದಿಲ್ಲ. ಆದರೆ, ಜಲ ಸಂವರ್ಧನೆ ಯೋಜನೆಗೆ ವಿಶ್ವಬ್ಯಾಂಕಿಗೆ ಹಣಕಾಸಿನ ನೆರವು ಪಡೆಯುವ ಪ್ರಸ್ತಾವನೆಯನ್ನು ಸಲ್ಲಿಸುವಾಗ ಪೂರಕವಾಗಿ 5 ಜಿಲ್ಲೆಗಳಲ್ಲಿ 10 ಕೆರೆಗಳ ಪ್ರಾಯೋಗಿಕ ಕೆಲಸಕ್ಕಾಗಿ ರೂ. 15.21, 510-00 ಗಳನ್ನು ಬಿಡುಗಡೆ ಮಾಡಲಾಗಿದೆ. (ವಿವರಗಳನ್ನು ಅನುಬಂದದಲ್ಲಿ ನೀಡಲಾಗಿದೆ).

ಆ) ಜಲ ಸಂವರ್ಧನೆ ಯೋಜನೆಯು ಸಮಗ್ರ ಕೆರೆಗಳ ಅಭಿವೃದ್ಧಿಪಡಿಸುವ ಯೋಜನೆಯಾಗಿದ್ದು, ಇದರಲ್ಲಿ ಅಂತರ್ಜಲವು ಸಹ ಅಭಿವೃದ್ಧಿಯಾಗುತ್ತದೆ ರಾಜ್ಯದಲ್ಲಿ ಪ್ರತಿ ಹೋಬಳಿಗೆ ಒಂದು ಕೆರೆಯಂತೆ ಹೂಳು ಎತ್ತುವ ಕಾರ್ಯಕ್ರಮವು ಸೇರಿದಂತೆ ಕೆರೆಗಳನ್ನು ಸಮಗ್ರ ಅಭಿವೃದ್ಧಿ ಪಡಿಸಲು ರೈತ ಕಾಯಕ ಕೆರೆ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ. ಮೊದಲನೇ ಹಂತದಲ್ಲಿ ಮತ ಕ್ಷೇತ್ರಕ್ಕೆ ಬಂದರಂತೆ 194 ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಉದ್ದೇಶಿಸಿರುತ್ತದೆ. ಅಂತಹ ಅಭಿವೃದ್ಧಿ ಕಾರ್ಯಗಳಿಂದ ಅಂತರ್‌ಜಲ ಅಭಿವೃದ್ಧಿ ಆಗುತ್ತದೆ.

ಇ) ಜಲ ಸಂವರ್ಧನೆ ಯೋಜನೆ ಹಾಗೂ ರೈತ ಕಾಯಕ ಕೆರೆ ಯೋಜನೆಗಳಿಗೆ ನಬಾರ್ಡ್‌ನಿಂದ ಯಾವುದೇ ಸಾಲ ಪಡೆದಿರುವುದಿಲ್ಲ.

ಈ) ಜಲ ಸಂವರ್ಧನೆ ಯೋಜನೆಯಡಿಯಲ್ಲಿ ಮುಂದಿನ ವರ್ಷ ಸಮಗ್ರ ಕೆರೆಯ ಅಭಿವೃದ್ಧಿಗಾಗಿ 400 ಕೆರೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಕೆರೆಯ ಹೆಸರು	ತಾಲ್ಲೂಕು	ಜಿಲ್ಲೆ	ಮೊದಲನೇ ಕಂತು	ಎರಡನೇ ಕಂತು	ಮೂರನೇ ಕಂತು	ನಾಲ್ಕನೇ ಕಂತು	ಒಟ್ಟುಮೊತ್ತ
1)	ಗೋಕಟ್ಟೆ ಬಸವಾಡ ಗ್ರಾಮ	ರಾಯಬಾಗ್	ಬೆಳಗಾಂ	1,26,000-00	94,500.00	63,000.00	-	2,83,500.00
2)	ದೇವಿ ಹೊಂಡ ಕೆರೆ ದೇವಿ ಹೊಸೂರು ಗ್ರಾಮ	ಹಾವೇರಿ	ಹಾವೇರಿ	1,22,000.00	-	-	-	1,23,000.00
3)	ಚಳ್ಳಕಟ್ಟೆ ಕೆರೆ, ದೇವಿ ಹೊಸೂರು ಗ್ರಾಮ	ಹಾವೇರಿ	ಹಾವೇರಿ	84,000.00	-	-	-	84,000.00
4)	ಹಿರೇಕೆರೆ, ದೇವಿ ಹೊಸೂರು ಗ್ರಾಮ	ಹಾವೇರಿ	ಹಾವೇರಿ	1,02,000.00	-	-	-	1,02,000.00
5)	ಚಿಕ್ಕಮಲ್ಲೆ ಕೆರೆ, ಪಕ್ಕಮಲ್ಲೆ ಗ್ರಾಮ	ಮಾಲೂರು	ಕೋಲಾರ	56,000.00	42,000.00	-	-	98,000.00
6)	ಹುಳದೇವನ ಹಳ್ಳಿ ಕೆರೆ, ಹುಳದೇವನ ಗ್ರಾಮ	ಮಾಲೂರು	ಕೋಲಾರ	3,29,120.00	-	-	-	3,29,120.00
7)	ಒಬಟ್ಟಿ ಕೆರೆ ಒಬಟ್ಟಿ ಗ್ರಾಮ	ಮಾಲೂರು	ಕೋಲಾರ	85,600.00	-	-	-	85,600.00
8)	ಕಲಿ ಕೆರೆ, ಕಲಿಕೆರೆ ಗ್ರಾಮ	ಕೊಪ್ಪಳ	ಕೊಪ್ಪಳ	48,960.00	-	-	-	48,960.00
9)	ಲಿಬಿಗೆರೆ ಕೆರೆ, ಲಿಬಿಗೆರೆ ಗ್ರಾಮ	ಕೊಪ್ಪಳ	ಕೊಪ್ಪಳ	59,160.00	44,370.00	-	-	1,03,530.00
10)	ಹುಣಸಗೆರೆ ಕೆರೆ ಹುಣಸಗೆರೆ ಗ್ರಾಮ	ಹುಮ್ನಾಬಾದ್	ಬೀದರ್	2,64,800.00	-	-	-	2,64,800.00
		ಒಟ್ಟು		12,77,640.00	1,80,870.00	63,000.00	-	15,21,510.00